**ದಿಃ09.01.2026 ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ 1ನೇ ಪ್ರತಿವಾದಿ ಪರ ಶ್ರೀ.ಎನ್.ಜಿ.ವಿ ವಕೀಲರಿಂದ ಃ**

1ನೇ ಪ್ರತಿವಾದಿಗೆ ಆಸ್ತಿ ಇದೆ. ಸದರಿಯವರಿಗೆ ಇರುವ ಆಸ್ತಿ ಯಾವ ಯಾವ ಸರ್ವೆ ನಂಬರಿನಲ್ಲಿ ಇದೆ ಎಂದು ನನಗೆ ಗೊತ್ತಿಲ್ಲ. 2ನೇ ಪ್ರತಿವಾದಿ 1ನೇ ಪ್ರತಿವಾದಿಯ ಮಗ ಎಂದರೆ ಸರಿ. 1ನೇ ಪ್ರತಿವಾದಿಯ ಆಸ್ತಿ ಮೇಲೆ ನನಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿ. 1ನೇ ಪ್ರತಿವಾದಿಗೆ ಸೇರಿದ ಆಸ್ತಿಯಲ್ಲಿ ಅವರೇ ಸಾವಧೀನ ಅನುಭದಲ್ಲಿ ಇದ್ದಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. 1ನೇ ಪ್ರತಿವಾದಿಗೆ ಸೇರಿದ ಜಾಗವನ್ನು ನೋಡಿದೀರಾ ಎಂದರೆ ಸಾಕ್ಷಿ ನಮ್ಮ ಆಸ್ತಿಗೆ ಹೊಂದಿಕೊಂಡಂತೆ ಇದ್ದು ಅದು ಪೈಸಾರಿ ಜಾಗ ಎನ್ನುತ್ತಾರೆ. ನಾನು ನೋಡಿದ ಜಾಗದಲ್ಲಿ 1ನೇ ಪ್ರತಿವಾದಿ ಕೃಷಿ ಮಾಡುತ್ತಿದ್ದು ಅದರ ಉತ್ಪನ್ನವನ್ನು ಅವರೇ ತೆಗೆದುಕೊಳ್ಳುತ್ತಿದ್ದಾರೆ ಎಂದರೆ ಸರಿ. ಸದರಿ ಜಾಗದಲ್ಲಿ 1ನೇ ಪ್ರತಿವಾದಿಯನಲುನ ಹೊರತು ಪಡಿಸಿ ಅವರ ಸಹೋದರರು ಯಾರು ಕೃಷಿ ಮಾಡುತ್ತಿಲ್ಲ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಸಾಕ್ಷಿಗೆ ಆರ್.ಟಿ.ಸಿ ಯನ್ನು ತೋರಿಸಿ ಅದರಲ್ಲಿ ಯಾರ ಹೆಸರು ನಮುದೂ ಆಗಿದೆ ಎಂದರೆ ಸಾಕ್ಷಿ 1ನೇ ಪ್ರತಿವಾದಿಯ ಹೆಸರು ನಮೂದು ಆಗಿದೆ ಎನ್ನುತ್ತಾರೆ. ಸಾಕ್ಷಿಗೆ ತೋರಿಸಲಾದ ಆರ್.ಟಿ.ಸಿಯನ್ನು ನಿಡಿ.1 ಎಂದು ಗುರುತಿಸಲಾಯಿತು. ನಿಡಿ.1 ರಲ್ಲಿ 1ನೇ ಪ್ರತಿವಾದಿಯ ಹೆಸರು ಹೊರೆತು ಪಡಿಸಿ ಅವರ ಸಹೋದರರ ಹೆಸರು ನಮೂದು ಇಲ್ಲ ಎಂದರೆ ಸರಿ. ಸಾಕ್ಷಿಗೆ ನಕಾಶೆಯನ್ನು ತೋರಿಸಿ ಅದು ಯಾರ ಜಾಗದ ನಕಾಶೆ ಎಂದರೆ ಸಾಕ್ಷಿ ಅದು ನನ್ನ ಜಾಗದ ನಕಾಶೆ ಎನ್ನುತ್ತಾರೆ. ಸಾಕ್ಷಿಗೆ ತೋರಿಸಲಾದ ನಕಾಶೆಯ ದೃಢೀಕೃತ ನಕಲನ್ನು ನಿಡಿ.2 ಎಂದು

ಗುರುತಿಸಲಾಯಿತು. ನಿಮ್ಮ ಆಸ್ತಿ ಯಾವ ಸರ್ವೆ ನಂಬರಿನಲ್ಲಿ ಇದೆ ಎಂದರೆ ಸಾಕ್ಷಿ ಸರ್ವೆ ನಂ.356/151 ರಲ್ಲಿ ಇದೆ ಎನ್ನುತ್ತಾರೆ. ಸರ್ವೆ ನಂ.356/151 ರ ಪಶ್ಚಿಮ ಮತ್ತು ಉತ್ತರಕ್ಕೆ ಇರುವ ಆಸ್ತಿ ಯಾರಿಗೆ ಸೇರಿದ್ದು ಅಂದರೆ ಸಾಕ್ಷಿ ನನಗೆ ಮಾಹಿತಿ ಇಲ್ಲ ಎನ್ನುತ್ತಾರೆ. ನಿಡಿ.2 ರಲ್ಲಿ ಕಾಣುವಂತೆ ಸರ್ವೆ ನಂ.356/39 ರ ಮೇಲ್ಭಾಗದಲ್ಲಿ ಕಾಣುವ 2 ಗೆರೆಗಳ ಜಾಗ ಏನು ಎಂದರೆ ಸಾಕ್ಷಿ ನಾನು ಹಾಜರು ಮಾಡಿರುವ ನಕಾಶೆಯಲ್ಲಿ ಆ ರೀತಿ ಲಕ್ಷಣ ಇಲ್ಲ ಎನ್ನುತ್ತಾರೆ. ನಿಡಿ.2 ಮತ್ತು ನಿಪಿ.8 ಕ್ಕೂ ವ್ಯತ್ಯಾಸ ಕಂಡು ಬರುತ್ತದೆ. ರಸ್ತೆ ಮತ್ತು ದಾವಾ ಸ್ವತ್ತಿನ ಮಧ್ಯೆ ಬೇರೆ ಯಾವುದೇ ಜಾಗ ಇಲ್ಲ. ನಾನು ಸರ್ವೆ ನಂ.356/151 ರ 2.30 ಎಕರೆ ಸಂಬಂಧ ಪರಿಹಾರ ಕೇಳುತ್ತಿದ್ದೇನೆ. ಸಾಕ್ಷಿ ಮುಂದುವರೆದು ಪಂಚಾಯಿತಿ ರಸ್ತೆಗೆ ನನ್ನ ಜಾಗ ಹೊಂದಿಕೊಂಡಂತಿದೆ ಎನ್ನುತ್ತಾರೆ. ಪಂಚಾಯಿತಿ ರಸ್ತೆ ನನ್ನ ಜಾಗದ ಪಶ್ಚಿಮ ದಿಕ್ಕಿನಲ್ಲಿ ಇದೆ. ಪಂಚಾಯಿತಿ ರಸ್ತೆಗೆ ಪ್ರತ್ಯೇಕ ಸರ್ವೆ ನಂಬರ ಇದೇಯಾ ಎಂದರೆ ಸಾಕ್ಷಿ ನನ್ನ ಜಾಗ ಸಹ ಸ್ವಲ್ಪ ರಸ್ತೆಗೆ ಹೋಗಿದೆ ಎನ್ನುತ್ತಾರೆ. ನನಗೆ ಸೇರಿದ ದಾವಾ ಸ್ವತ್ತಿನ ಪೈಕಿ ಸುಮಾರು 15 ಸೆಂಟ್ಸ್ ಆಸ್ತಿಯನ್ನು1ನೇ ಪ್ರತಿವಾದಿ ಉಬ್ಚಾಯಿಸಿಕೊಂಡಿರುತ್ತಾರೆ. ಪಂಚಾಯಿತಿ ರಸ್ತೆಯ ಮತ್ತೊಂದು ಬದಿಯಲ್ಲಿ 1ನೇ ಪ್ರತಿವಾದಿ ಸಾವಧೀನದಲ್ಲಿ ಇರುವ ಆಸ್ತಿ ಇದೆ. ಪ್ರತಿವಾದಿ ಸ್ವಾಧೀನದಲ್ಲಿ ಇರುವ ಆಸ್ತಿಯ ಸರ್ವೆ ನಂಬರ್ ನನಗೆ ಗೊತ್ತಿಲ್ಲ. ದಾವಾ ಸ್ವತ್ತನ್ನು ಇದುವರೆಗೆ ನಾನು ಸರ್ವೆ ಮಾಡಿಸಿಲ್ಲ. ದಾರಿ ಸಂಬಂಧ ನಾನು ಯಾವತ್ತು ಅಳತೆ ಮಾಡಿಸಿ ನಕ್ಷೆ ಮಾಡಿಸಿಲ್ಲ. ನಿಪಿ.3 ರಲ್ಲಿ ತೋರಿಸಿರುವ 15 ಸೆಂಟ್ಸ್ ಫೂಟ್ ಖರಾಬ್ ದಾವಾ ಸ್ವತ್ತಿನ ಯಾವ ಭಾಗದಲ್ಲಿ ಇದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಈ ದಾವೆ ಸಂಬಂಧ ಗಲಾಟೆ ಯಾವ ದಿನಾಂಕದಂದು

ಆಗಿದೆ ಎಂದು ನೆನಪಿಲ್ಲ. ಸಾಕ್ಷಿ ಮುಂದುವರೆದು 6 ವರ್ಷ ಆಗಿದೆ ಎನ್ನುತ್ತಾರೆ. ನನ್ನ ಮತ್ತು ಪ್ರತಿವಾದಿಗಳ ನಡುವೆ ರಸ್ತೆ ವಿಚಾರದಲ್ಲಿ ಗಲಾಟೆ ಆಗಿದೆ. ಪಂಚಾಯಿತಿ ರಸ್ತೆ ದಾವಾ ಸ್ವತ್ತಿನಲ್ಲಿ ಹಾದು ಹೋಗಿದೆ. ಪ್ರತಿವಾದಿ ನಾವು ಹಾಕಿದ್ದ ಪೈಪನ್ನು ತೆಗೆದು ಕಡಂಗ ಮಾಡಿದ್ದ ಹಾಗಾಗಿ ಪೊಲೀಸರಿಗೆ ದೂರು ಕೊಟ್ಟು ಈ ದಾವೆ ಹೂಡಿದ್ದೇನೆ ಎನ್ನುತ್ತಾರೆ. ಪೊಲೀಸರಿಗೆ ಗಲಾಟೆ ಸಂಬಂಧ ಕೊಟ್ಟ ದೂರಿನ ಬಗ್ಗೆ ನನ್ನ ಬಳಿ ದಾಖಲೆ ಇದೆ. ಅದನ್ನು ನ್ಯಾಯಾಲಯದ ಮುಂದೆ ಹಾಜರು ಮಾಡಲು ನನಗೇನೂ ಅಭ್ಯಂತರ ಇಲ್ಲ. ಈ ದಾವೆ ಹೂಡುವ ಪೂರ್ವದಲ್ಲಿ ಒಂದು ಭಾರಿ ಮಾತ್ರ ಗಲಾಟೆ ಆಗಿತ್ತು. ಕುಂಬಳಚೇರಿಯಿಂದ ಪಾನತಿಲತಟ್ಟು ದಾಟಿಕೊಂಡು ಕುಂಡಾಡು ಶಾಲೆಯನ್ನು ದಾಟಿ ತಿಮ್ಮಪ್ಪನವರ ಜಾಗದ ಮೂಲಕ ಸರ್ವೆ ನಂ.356/151 ಕ್ಕೆ ಬರಲು ರಸ್ತೆ ಇದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಅದೇ ರಸ್ತೆ ಕುಂಬಳಚೇರಿಗೆ ಹೋಗಿರುವ ಪಂಚಾಯಿತಿ ರಸ್ತೆಗೆ ಸಂಪರ್ಕಿಸುತ್ತದೆ ಎನ್ನುತ್ತಾರೆ. ಕುಂಬಳಚೇರಿಯಿಂದ ಪಾನತಿಲತಟ್ಟು ಆಗಿ ಪಡಪ್ಪು ಚಂದ್ರಶೇಕರ ಇವರ ಆಸ್ತಿ ಮೂಲಕ ದಾಟಿ ಸೋಮಶೇಕರ ಇವರ ಆಸ್ತಿಯನ್ನು ದಾಟಿ ದಾವಾ ಸರ್ವೆ ನಂಬರಿಗೆ ಮತ್ತೊಂದು ರಸ್ತೆ ಬರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಅದು ಪಚಾಯಿತಿ ರಸ್ತೆ ಎನ್ನುತ್ತಾರೆ. ನಾನು ಹೇಳಿದ ರೀತಿ 1ನೇ ಪ್ರತಿವಾದಿ ಆಸ್ತಿಯಲ್ಲಿ ಯಾವುದೇ ದಾರಿ ಇಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ನನ್ನ ಆಸ್ತಿಯಲ್ಲಿ ದಾರಿ ಇದೆ ಎನ್ನುತ್ತಾರೆ. ಸಾಕ್ಷಿಗೆ ನಕಾಶೆಯನ್ನು ತೋರಿಸಿ ಅದರಲ್ಲಿ ಸರ್ವೆ ನಂ.356/341, 356/174, 356/151 ಮತ್ತು 356/208 ರ ಆಸ್ತಿಗಳನ್ನು

ತೋರಿಸಲಾಗಿದೆ ಎಂದರೆ ಸಾಕ್ಷಿ ದಾಖಲೆಯನ್ನು ನೋಡಿ ಒಪ್ಪಿರುತ್ತಾರೆ. ಸಾಕ್ಷಿಗೆ ತೋರಿಸಲಾದ ದಾಖಲೆಯನ್ನು ನಿಡಿ.3 ಎಂದು ಗುರುತಿಸಲಾಯಿತು.

2. ನಾನು ವಿವರಿಸಿದ ಹಾಗೆ ಯಾವುದೇ ರಸ್ತೆ ಇಲ್ಲ ಎಂದರೆ ಸರಿಯಲ್ಲ. ನಾನು ದಾವಾ ಸ್ವತ್ತಿನ ಮಾಲೀಕನಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳು ಪಂಚಾಯಿತಿ ರಸ್ತೆ ಅಥವಾ ದಾವಾ ಸ್ವತ್ತಿನಲ್ಲಿ ಯಾವುದೇ ಕಡಂಗ ತೆಗೆದು ಗಲಾಟೆ ಮಾಡಿಲ್ಲ ಎಂದರೆ ಸರಿಯಲ್ಲ. ಪದೇ ಪದೇ ನಾನೇ ಪ್ರತಿವಾದಿಗಳಿಗೆ ತೊಂದರೆ ಕೊಡುತ್ತಿದ್ದಾರೆ ಎಂದರೆ ಸರಿಯಲ್ಲ. ನಿಪಿ.4 ರಿಂದ 8 ನ್ನು ಈ ಕೇಸಿಗಾಗಿ ಸೃಷ್ಟಿಮಾಡಿ ತಂದು ಹಾಜರು ಮಾಡಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಹೇಳಿರುವ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ.

**ಪಾಟಿ ಸವಾಲುಃ 2 ರಿಂದ 5 ನೇ ಪ್ರತಿವಾದಿಗಳ ಪರ ಶ್ರೀ.ಜೆ.ಎಸ್.ಬಿ ವಕೀಲರಿಂದಃ**

1ನೇ ಪ್ರತಿವಾದಿ ಪರ ಮಾಡಲಾದ ಪಾಟಿ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿ.ಇದೆ.

ಸಹಿ/-

(ಸಿ. ವೀರಭದ್ರಯ್ಯ)
ಹಿರಿಯ ಸಿವಿಲ್ ನ್ಯಾಯಾಧೀಶರು,
ಕೊಡಗು, ಮಡಿಕೇರಿ.